**ದಿನಾಂಕಃ 23.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

**4.** ನಾನು ಡ್ರೈವಿಂಗ್ ಸ್ಕೂಲ್ ನಡೆಸುತ್ತಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಮನೆಯ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ನಮ್ಮ ವಕೀಲರಿಗೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ನಿಮ್ಮ ಬಳಿ ಯಾವುದೇ ದಾಖಲೆಗಳು ಇಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಯ ತಾಯಿಗೆ breast cancer ಇದ್ದ ಬಗ್ಗೆ ಖಾತರಿ ಪಡಿಸಿಕೊಂಡಿದ್ದೀರಾ ಎಂದರೆ ಆರೋಪಿ ಹೇಳಿದ್ದನ್ನು ನಂಬಿಕೊಂಡಿದ್ದೆನು ಎಂದು ನುಡಿಯುತ್ತಾರೆ. ಯಾವ ಕಾರಣಕ್ಕಾಗಿ ಆರೋಪಿ ಹಣ ಕೇಳಿದರು ಎಂದು ನೋಟಿಸು, ದೂರು ಹಾಗೂ ಪ್ರಮಾಣ ಪತ್ರದಲ್ಲಿ ನಮೂದಿಸಿಕೊಂಡಿದ್ದೀರಾ ಎಂದರೆ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ತಾಯಿಗೆ ಯಾವುದೇ ರೀತಿ ಕಾಯಿಲೆ ಇಲ್ಲದಿದ್ದರೂ ನೀವು ಸೃಷ್ಟಿಸಿಕೊಂಡು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**5.** ದಿ.15.02.2022 ರಂದು 5 ಲಕ್ಷ ರೂ. ಹಾಗೂ ದಿ.20.02.2022 ರಂದು 5 ಲಕ್ಷ ರೂ. ನಿಮ್ಮ ಬಳಿ ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುವುದಿಲ್ಲ. ಆ ವೇಳೆಯಲ್ಲಿ ನಿಮ್ಮ ಬಳಿ 10 ಲಕ್ಷ ರೂ. ಗಳನ್ನು ಏತಕ್ಕಾಗಿ ಇಟ್ಟುಕೊಂಡಿದ್ದೀರಿ ಎಂದರೆ ಸಾಕ್ಷಿಯು ಆ ಹಣವನ್ನು ನನ್ನ ಗಂಡ ರಾಘವೇಂದ್ರ ನನಗೆ ನೀಡಿದ್ದರು, ಅದನ್ನು ಇಟ್ಟುಕೊಂಡಿದೆನು ಎಂದು ನುಡಿಯುತ್ತಾರೆ. ನಿಮ್ಮ ಗಂಡನನ್ನು ನ್ಯಾಯಾಲಯಕ್ಕೆ ಸಾಕ್ಷಿದಾರರಾಗಿ ಹಾಜರುಪಡಿಸಲು ತೊಂದರೆಯೇ ಎಂದರೆ ತೊಂದರೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಈ ಮೊದಲು ನಿಮ್ಮ ಸಾಕ್ಷ್ಯದಲ್ಲಿ 12 ಮನೆಗಳಿಂದ ಬಂದಂತಹ ಬಾಡಿಗೆ

ಹಣವನ್ನು ಇಟ್ಟುಕೊಂಡಿದೆನು ಎಂದು ಸಾಕ್ಷ್ಯ ನುಡಿದಿದ್ದು, ಈಗ ನನ್ನ ಗಂಡ ನೀಡಿದಂತಹ 10 ಲಕ್ಷ ರೂ.ಗಳನ್ನು ಇಟ್ಟುಕೊಂಡಿದ್ದೆನು ಎಂದು ಸಾಕ್ಷ್ಯ ನುಡಿದಿರುತ್ತೀರಿ ಎರಡರಲ್ಲಿ ಯಾವುದು ಸರಿ ಎಂದರೆ ಸಾಕ್ಷಿಯು ಎರಡೂ ಸರಿ ಎಂದು ನುಡಿಯುತ್ತಾರೆ. ಆರೋಪಿಗೆ ಹಣ ನೀಡುವ ವೇಳೆಯಲ್ಲಿ ಆರೋಪಿ ಹಾಗೂ ಅವರ ಹೆಂಡತಿ ರೂಪಶ್ರೀ ಹಾಜರಿದ್ದರು. ಆರೋಪಿಗೆ ಹಣ ನೀಡುವ ವೇಳೆಯಲ್ಲಿ ನನ್ನನ್ನು ಹೊರತುಪಡಿಸಿ ನನ್ನ ಕಡೆಯಿಂದ ಯಾರು ಇರಲಿಲ್ಲ. ಆರೋಪಿ ಎರಡು ಚೆಕ್ಕುಗಳನ್ನು ನೀಡಿದ್ದರು ಎಂದು ಸಾಕ್ಷಿ ನುಡಿದಿರುತ್ತೀರಿ ಯಾವಾಗ ನೀಡಿದರು ಎಂದರೆ ಅದರ ನಿರ್ದಿಷ್ಟ ದಿನಾಂಕ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

**6**. ಆರೋಪಿ ನಿಮಗೆ ಯಾವಾಗ ಚೆಕ್ಕು ನೀಡಿದ್ದರು ಎಂದರೆ ಸಾಕ್ಷಿಯು ನಾನು ಹಣ ನೀಡಿದ ವೇಳೆಯಲ್ಲಿ ಆರೋಪಿ ನನಗೆ ಚೆಕ್ಕು ನೀಡಿದರು ಎಂದು ನುಡಿಯುತ್ತಾರೆ. ಚೆಕ್ಕನ್ನು ಆರೋಪಿಯೇ ಭರ್ತಿ ಮಾಡಿದರು. Signature differs ಎಂದು ಎರಡು ಚೆಕ್ಕುಗಳು ಹಿಂದಿರುಗಿರುತ್ತವೆ. ಚೆಕ್ಕುಗಳನ್ನು FSL ಗೆ ಕಳುಹಿಸಲು ತೊಂದರೆಯೇ ಎಂದರೆ ತೊಂದರೆ ಇರುವುದಿಲ್ಲ.

**7.**ನೋಟೀಸು ಆರೋಪಿಗೆ ಜಾರಿಯಾಗಿರುವುದಿಲ್ಲ ಎಂದರೆ ಅವರು ಪಡೆದುಕೊಂಡಿರುವುದಿಲ್ಲ ಎಂದುನುಡಿಯುತ್ತಾರೆ. ನೋಟೀಸು adressee left ಎಂದು ಹಿಂದಿರುಗಿರುತ್ತದೆ ಎಂದರೆ ಸರಿ. ಆರೋಪಿಯು ಆ ವಿಳಾಸದಲ್ಲಿ ಇಲ್ಲದಿದ್ದರೂ ಸಹ ತಪ್ಪು ವಿಳಾಸ ನೀಡಿ ನೋಟೀಸು ನೀಡಿರುತ್ತೀರಿ ಎಂದರೆ ಸಾಕ್ಷಿಯು ನೋಟೀಸಿನಲ್ಲಿ ನಮೂದಿಸಿರು ವಿಳಾಸವು ಸ್ವಂತ ಮನೆಯ ವಿಳಾಸವಾಗಿದ್ದುಆ ವಿಳಾಸಕ್ಕೆ ನೋಟೀಸು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಗಂಡನೂ ಸಹ ಆರೋಪಿಗೆ ಹಣ ನೀಡಿದರು. ನನ್ನ ಗಂಡ ಆರೋಪಿಗೆ ಯಾವಾಗ ಹಣ

ನೀಡಿದರು ಎಂದು ನನಗೆ ಗೊತ್ತಿಲ್ಲ, ಆದರೆ ಆರೋಪಿ ನನ್ನ ಗಂಡನಿಂದ 10 ಲಕ್ಷ ರೂ. ಮತ್ತು ನನ್ನಿಂದ 10 ಲಕ್ಷ ರೂ. ಪಡೆದುಕೊಂಡಿದ್ದರು. ನಿಮ್ಮ ಗಂಡನಿಂದ 10 ಲಕ್ಷ ರೂ. ಹಣವನ್ನು ಆರೋಪಿ ಮರುಪಾವತಿಸಿದ್ದಾರೆಯೇ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.